MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:103 ENGLISH DAILY Subscription Yearly - Rs. - MONDAY 6-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ಸೋಯಮೀಲ್, ಎಣ್ಣೆ ಹಿಂಡಿ ರಫ್ತು ಹೆಚ್ಚಳ

ಭಾರತದಿಂದ 2020 ನವೆಂಬರ್ ನಲ್ಲಿ ಸೋಯಮೀಲ್ ರಫ್ತು 198776 ಟನ್ ಗಳಿಗೆ ಹೆಚ್ಚಳಗೊಂಡಿದೆ. ಹಿಂದಿನ ವರ್ಷ ನವೆಂಬರ್ ನಲ್ಲಿ 69415 ಟನ್ ಸೋಯಮೀಲ್ ರಫ್ತಾಗಿತ್ತು. ಸೋಯಮೀಲ್ ರಫ್ತು 2020 ಎಪ್ರಿಲ್ ನಿಂದ ನವೆಂಬರ್ ತನಕ, 2020–21 ಆರ್ಥಿಕ ವರ್ಷದಲ್ಲಿ 28 ಶೇಕಡಾ ಹೆಚ್ಚಳಗೊಂಡು 636981 ಟನ್ ಗಳಾಗಿದೆ. 2019 ಎಪ್ರಿಲ್ ನಿಂದ ನವೆಂಬರ್ ತನಕ 497116 ಟನ್ (2019–20 ಆರ್ಥಿಕ ವರ್ಷದಲ್ಲಿ) ಸೋಯಮೀಲ್ ರಫ್ತು ಮಾಡಲಾಗಿತ್ತು. 2020 ನವೆಂಬರ್ ತಿಂಗಳಲ್ಲಿ ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು ಹಿಂದಿನ ವರ್ಷದ 208401 ಟನ್ ಗಳಿಂದ 59 ಶೇಕಡಾ ವೃದ್ಧಿಯಾಗಿ 331171 ಟನ್ ಗಳಾಗಿದೆ. 2020 ಎಪ್ರಿಲ್ ನಿಂದ ನವೆಂಬರ್ ತನಕ ಹಿಂದಿನ ವರ್ಷದ ಈ ಅವಧಿಯ 1734875 ಟನ್ ಗಳಿಂದ 12 ಶೇಕಡಾ ಹೆಚ್ಚಳಗೊಂಡು 1948699 ಟನ್ ಗಳಾಗಿದೆ.

## ಅಕ್ಕಿ ರಫ್ತು ದರ ಇಳಿಕೆ

ಭಾರತ, ಥೈಲಾಂಡ್ ಅಕ್ಕಿ ರಫ್ತೂ ದರ ಕರೆನ್ಸಿ ದುರ್ಬಲತೆ. ಹಾಗೂ ಅಕ್ಕಿಯ ಅಧಿಕ ಪೂರೈಕೆಯಿಂದ ಇಳಿಕೆಯಾಗಿದೆ. ವಿಯೆಟ್ನಾಂ ಅಕ್ಕಿ ರಫ್ತು ದರವೂ ಇಳಿಕೆ ಕಂಡಿದೆ. ಈ ವರ್ಷ ಭಾರತದಿಂದ 20 ಮಿಲಿಯನ್ ಟನ್ ಅಕ್ಕಿ ರಫ್ತಿನ ನಿರೀಕ್ಷೆಯಿದ್ದು, ಇದರಲ್ಲಿ 16 ಮಿಲಿಯನ್ ಟನ್ ಬಾಸ್ಮತಿಯೇತರ ಹಾಗೂ 4 ಮಿಲಿಯನ್ ಟನ್ ಬಾಸ್ಮತಿ ಅಕ್ಕಿ ರಫ್ತಾಗುವ ನಿರೀಕ್ಷೆಯಿದೆ. ಖಾರಿಫ್ ಬೆಳೆಯಲ್ಲಿ ಭಾರತದ ಉತ್ಪಾದನೆ 107 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ.